# ಸರ್ಕಾರಿ ಶಾಲೆಗಳು ಸರಿಯಾಗಿ ಕೆಲಸ ಮಾಡದೆದರುವುದೇ ಬಾಲ ಕಾರ್ಮಿಕತೆಗೆ ಮೂಲ ಕಾರಣ

**ಡಾ. ಹಣಮಂತ್ರಾಯ ಸಿ, ಕರಡ್ಡಿ**
ಸಮಾಜ ಕಾರ್ಯ ಅಧ್ಯಯನ ವಿಭಾಗ, ರಾಯಚೂರ ವಿಶ್ವವಿದ್ಯಾಲಯ ರಾಯಚೂರ
9886108774

ನಮ್ಮ ದೇಶದಲ್ಲಿ 11 ಲಕ್ಷ ಸರ್ಕಾರಿ ಶಾಲೆಗಳಿದ್ದು (ಇಡೀ ಜಗತ್ತಿನಲ್ಲಿ ಹೆಚ್ಚು) ಬಹುಪಾಲು ಹಳ್ಳಿಗಳಲ್ಲಿಯೇ ಇದ್ದರೂ ಈ ಶಾಲೆಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಹಾಗಾಗಿ ಬಾಲ ಕಾರ್ಮಿಕ ಪದ್ಧತಿ ಯತಾವತ್ತಾಗಿದೆ. 'ರಾಜ್ಯವು ಮಕ್ಕಳ ಸ್ವಾತಂತ್ರ್ಯ ಹಾಗೂ ಅಭಿಯಾನಕ್ಕೆ ಪೂರಕವಾಗಿ ಮಗುವಿನ ಆರೋಗ್ಯ ಪೂರ್ವ ವಿಕಾಸಕ್ಕೆ ಅನುಗುಣವಾಗುವಂತಹ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸಿ ದೌರ್ಜನ್ಯಕ್ಕೆ ತುತ್ತಾಗದಂತೆ ಸಂರಕ್ಷಿತ ವಾತಾವರಣ ನೀಡುವ ಜವಾಬ್ದಾರಿಯನ್ನು ಹೊಂದಿದೆ' ಎಂದು ನಿರ್ದೇಶನ ಪೂರ್ವಕವಾಗಿ ನಮ್ಮ ಘನ ಸಂವಿಧಾನವು ಮಾರ್ಗದರ್ಶಿಸಿದೆ. ದೇಶದ ಸಂವಿಧಾನ ಜಾರಿಗೊಂಡು ಆರು ದಶಕಗಳೆ ಕಳೆದು ಹೋದರು ಸದ್ಯದ ಪರಿಸ್ಥಿತಿಯಲ್ಲಿ ಮಕ್ಕಳ ಸಂರಕ್ಷಣೆ ಮತ್ತು ಅವರಿಗೆ ಪೂರಕವಾದ ವಾತಾವರಣವನ್ನು ಒದಗಿಸುವಲ್ಲಿ ಗಣನೀಯವಾಗಿ ಸೋತಿದ್ದೇವೆ. ಹಾಗೆಂದು ನಮ್ಮ ಸಾಧನೆ ಕಳಪೆ ಎಂದೆನಿಸಬೇಕಿಲ್ಲ, ಆದರೆ ಮಕ್ಕಳ ಕ್ಷೇತ್ರದಲ್ಲಿ ಇನ್ನೂ ಸಾಧಿಸಬೇಕಾದುದ್ದನ್ನು ಜ್ಞಾಪಿಸುವ ಸಮಯವೆಂದು ಭಾವಿಸಬೇಕು.

ಮಗು ಎಂದರೆ ಮುಗ್ದತೆ ಅದನ್ನು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳಿಕೆಯಂತೆ 'ಈ ಪ್ರಪಂಚದಲ್ಲಿ ನಾವು ನಿಜವಾದ ಶಾಂತಿಯನ್ನು ಹೊಂದಬೇಕಾದರೆ, ನಾವು ಮೊದಲು ಅದನ್ನು ಮಕ್ಕಳಿಂದ ಪ್ರಾರಂಭಿಸಬೇಕು. ಮಕ್ಕಳ ವಿಕಾಸವೇ ಸರ್ವಸ್ವ'. ನಮ್ಮ ಸರ್ಕಾರ ಅಧಿಕಾರ ಶಾಹಿ ಮಕ್ಕಳನ್ನು 'ಭವಿಷ್ಯದ ಪ್ರಜೆಯೆಂದು' ನೋಡುತ್ತಿದೆ. ಅದಕ್ಕೇನೇ ಅವರ ಹಕ್ಕುಗಳನ್ನು ಕೂಡ 'ನಾಳೆಗೆ ಕೊಟ್ಟರಾಯಿತು' ಎಂದು ಭಾವಿಸಿರಬೇಕು. ಸಂಖ್ಯೆಯಲ್ಲಿ ಭಲಾಢ್ಯವಾದ ಮಕ್ಕಳು ರಾಜಕೀಯವಾಗಿ ಅಶಕ್ತರೇ, ಮತದಾನ ಮಾಡಲು ಹದಿನೆಂಟು ವರ್ಷ ತುಂಬಬೇಕಾಗಿರುವುದರಿಂದ ಅವರ ಕೂಗೂ ಸಂಸತ್ತಿಗೆ ಮುಟ್ಟುವುದಿಲ್ಲ. ಸದ್ಯದಲ್ಲಿ ಕರ್ನಾಟಕವನ್ನು ಬಾಲ ಕಾರ್ಮಿಕ ಪದ್ಧತಿ ಮುಕ್ತ ರಾಜ್ಯವನ್ನಾಗಿ ಮಾಡಲಾಗುವುದು ಎಂದು ಘೋಷಿಸುತ್ತಲೇ ಇರುತ್ತೇವೆ ಆದರೆ ಕನಸು ನನಸಾಗುತ್ತಿಲ್ಲ. ತಂದೆ ತಾಯಿಯರ ಅಜ್ಞಾನ, ನಿರಾಸಕ್ತಿ, ಪ್ರೀತಿ–ವಾತ್ಸಲ್ಯ ಕಾಣದ ಮಕ್ಕಳು, ಮನೆಯಿಂದ ಗ್ರಾಮದಿಂದ ನಗರ, ಪಟ್ಟಣಗಳಿಗೆ ಓಡಿ ಹೋಗುವ ದುಸ್ಸಾಹಸಕ್ಕೆ ಕೈ ಹಾಕುತ್ತಾರೆ, ಹೊಟ್ಟೆ ಪಾಡಿಗಾಗಿ ಬಾಲ ಕಾರ್ಮಿಕನಾಗಿ ಕೆಟ್ಟ ಚಟ, ಸಂಘದೋಷದಿಂದಾಗಿ ಅಪರಾಧ ಕೃತ್ಯಗಳಿಗೆ ಕೈ ಹಾಕಿ ಕಾನೂನಿನ ಸಂಘರ್ಷಕ್ಕೆ ಸಿಲುಕಿ ತಮ್ಮ ಸುಂದರವಾದ ಬಾಲ್ಯದಿಂದ ವಂಚಿತರಾಗುತ್ತಾರೆಂದು ಹಾಗೂ ಶಾಲೆ ಬಿಟ್ಟ ಮಗು ಸಮಾಜ ಘಾತುಕ ಕಾರ್ಯದಲ್ಲಿ ತೊಡಗಿ ಸದೃಢ ಸಮಾಜಕ್ಕೆ ಕಂಟಕವಾಗುತ್ತಾರೆಂದು ವರದಿ ತಿಳಿಸುತ್ತವೆ ಕಾರಣ ಸರ್ಕಾರಿ ಶಾಲೆಗಳು ತಮ್ಮ ಕೆಲಸ ಸರಿಯಾಗಿ ಮಾಡಿದರೆ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ. 'ಈ ಪ್ರಪಂಚ ಮಕ್ಕಳೊಂದಿಗೆ ಹೊಂದಿರುವ ನಂಬಿಕೆಗಿಂತಲೂ ಪವಿತ್ರವಾದುದ್ದು ಮತ್ತೊಂದಿಲ್ಲ. ಮಕ್ಕಳ ಹಕ್ಕನ್ನು ಗೌರವಿಸುವ ಅವರ ಅಭಿವೃದ್ಧಿಯನ್ನು ರಕ್ಷಿಸುವ ಅವರು ಭಯ ಮುಕ್ತ ವಾತಾವರಣದಲ್ಲಿ ಶಾಂತಿಯೋದು ಬೆಳೆಯುವ ವ್ಯವಸ್ಥೆಯನ್ನು ಖಾತ್ರಿ ಪಡಿಸುವುದಕ್ಕಿಂತ ಬೇರೆ ಯಾವುದೇ ಕೆಲಸ ಮುಖ್ಯವಾಗಲಾರದು' ಎಂದು ಕೋಫಿ ಅನ್ನಾನ್ ಅವರ ಮಕ್ಕಳ ಬಗೆಗೆ ಇರುವ ಪ್ರೀತಿಯನ್ನು, ಕಾಳಜಿಯನ್ನು, ಕಾರ್ಯತಂತ್ರವನ್ನು ರೂಪಿಸಲು ಸಹಾಯಕವಾಗುತ್ತದೆ.

'ಜ್ಞಾನದ ಬಲಕ್ಕೆ ಅಜ್ಞಾನದ ಕೇಡು ನೋಡಯ್ಯ'ಎನ್ನುವಂತೆ ನಮ್ಮ ಭಾರತವು ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಾಣವಾಗಬೇಕಾದರೆ ಶಿಕ್ಷಣವೇ ಶಕ್ತಿಯಾಗಿರುವುದರಿಂದ ಸಾಮಾಜಿಕ, ಆರ್ಥಿಕ, ನೈತಿಕ, ಭಾವನಾತ್ಮಕ ಬೆಸುಗೆಗೆ ಮಗುವಿನ ಸರ್ವಾಂಗೀಣ ಪ್ರಗತಿಗೆ ಶಿಕ್ಷಣವೇ ಮದ್ದಾಗಿರುವುದರಿಂದ ಮಕ್ಕಳು ವಿದ್ಯಾವಂತರಾಗಬೇಕು ಆಗ ಮಾತ್ರ ದೇಶ ಅಭಿವೃದ್ಧಿಯಾಗಲು ಸಾಧ್ಯ 14 ವರ್ಷದೊಳಗಿನ ಮಕ್ಕಳು ದುಡಿಮೆಗೆ ದೂಡಬಾರದು ಸರ್ಕಾರ ಇದಕ್ಕಾಗಿಯೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುತ್ತಿರುವುದಲ್ಲದೆ ಶಿಕ್ಷಣಕ್ಕೆ ಅತಿ ಹೆಚ್ಚಿನ ಅನುದಾನ ಖರ್ಚು ಮಾಡುತ್ತಿದೆ. ಇದನ್ನು ಮಕ್ಕಳು ಹಾಗೂ ಪೋಷಕರು ಉಪಯೋಗಿಸಬೇಕು.

ಮಕ್ಕಳ ಆರೋಗ್ಯಕ್ಕೆ ಹಾನಿಯುಂಟಾಗುವಂತಹ ಎಲ್ಲಾ ಉದ್ಯೋಗಗಳ ಆಧಾರದ ಮೇಲೆ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳಬಾರದು. ಕೃಷಿ ತಾಂತ್ರಿಕ ಸಲಕರಣೆಗಳಾದ ಹೊಲ ಉಳುವ ಟ್ರ್ಯಾಕ್ಟರ್ ಚಾಲನೆ, ಬೆಳೆಗಳಿಗೆ ರಸಾಯನಿಕ, ಕ್ರಿಮಿನಾಶಕಗಳನ್ನು ಸಿಂಪಡಿಸುವುದು, ಹತ್ತಿ ಬೀಜ ಕ್ರಾಸಿಂಗ್ ಮಾಡುವುದು, ಕಲ್ಲು ಹೊಡಿಯುವುದು ಶಿಕಾರ್ಹ ಅಪರಾಧ 14 ರಿಂದ 18 ವರ್ಷದ ಒಳಗಿನವರಿಗೆ ನಿಷಿದ್ಧವೆಂದು 1986ರ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯ ತಿರುಳು. ದೇಶದಲ್ಲಿ ಇಂತ

ಕಠಿಣ ಕಾನೂನುಗಳಿದ್ದರೂ ಬಾಲಕಾರ್ಮಿಕ ಪದ್ಧತಿ ಜೀವಂತವಾಗಿರುವುದು ನಮ್ಮೆಲ್ಲರ ದುರ್ದೈವ, ಸಂವಿಧಾನಕ್ಕೆ ಮಾಡುವ ಅಪಚಾರ. ಅಂಕಿ ಅಂಶಗಳನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಬದಲಾಗುತ್ತಿರುವ ಪ್ರಕರಣಗಳು ತಗ್ಗುತ್ತಿವೆ, ಹಾಗೆಂದು ಬಾಲ ಕಾರ್ಮಿಕ ಪದ್ಧತಿ ಕಡಿಮೆಯಾಗುತ್ತದೆ ಎಂದೇನೂ ಇಲ್ಲ ಅದು ಗ್ರಾಮೀಣ ಪ್ರದೇಶದಲ್ಲಿ ಹಾಗೂ ಸಣ್ಣ ಪುಟ್ಟ ನಗರಗಳಲ್ಲಿ ನಿರಂತರವಾಗಿ ನಡೆದಿದೆ.

ಬಾಲ ಕಾರ್ಮಿಕರನ್ನು ರಕ್ಷಿಸಿ ಪುನರ್ ವಸತಿ ಕಲ್ಪಸುವಲ್ಲಿ ಸರ್ಕಾರ ಹಗಲು ಸೇತುಬಂಧ ಶಾಲೆಗಳನ್ನು ಸ್ಥಾಪಿಸವೆ ಆದರೆ ಕೆಲಸ ತೃಪ್ತಿ ತಂದಿಲ್ಲ ಮುಂದಿನ ದಿನಗಲ್ಲಿ ವಸತಿಸಹಿತ ಶಾಲೆಗಳನ್ನಾಗಿ ಪರಿವರ್ತಿಸಬೇಕು. ಜೊತೆಗೆ ಪುನಃ ಶಾಲೆಯಿಂದ ಹೊರಗುಳಿಯುವದನ್ನು ತಡೆಗಟ್ಟಬೇಕು, ಸಾಧ್ಯ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಭಾರತ ಸಂವಿಧಾನದ 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀತಿಯ ಪರಿಣಾಮಕಾರಿ ಯೋಜನೆಗಳಾದ ಮಧ್ಯಾನದ ಬಿಸಿಯೂಟ, ಉಚಿತ ಪಠ್ಯ ಪುಸ್ತಕ, ಶಿಷ್ಯವೇತನ, ಪ್ರೋತ್ಸಾಧನ, ವಸತಿ ನಿಲಯ, ವಸತಿಸಹಿತ ಶಾಲೆಗಳು ಹಾಗೂ ಇನ್ನಿತರ ಶೈಕ್ಷಣಿಕ ಸೌಲಭ್ಯದ ಅರಿವು ಮೂಡಿಸಲು ಜಾಗೃತಿ ಕಾರ್ಯಕ್ರಮ ಅಪಾಯಕಾರಿ ಅಲ್ಲದ ಕೆಲಸದಲ್ಲಿರುವ ಬಾಲಕಾರ್ಮಿಕರ ದುಡಿಯುವ ಸಮಯವನ್ನು ದಿನವೊಂದಕ್ಕೆ 5 ಗಂಟೆಗಳಿಗೆ ನಿಯಂತ್ರಿಸಬೇಕು ಮತ್ತು ಕನಿಷ್ಠ 2 ಗಂಟೆಗಳ ಕಾಲ ಶಿಕ್ಷಣ ಒದಗಿಸಬೇಕು. ಹಾಗೂ ದೌರ್ಜನ್ಯಕ್ಕೊಳಗಾದ ಮಕ್ಕಳ ರಕ್ಷಣೆ, ಪೋಷಣೆ, ಪಾಲನೆಗಾಗಿ ಬಾಲ ನ್ಯಾಯ ಕಾಯ್ದೆ, ಮಕ್ಕಳ ಸಹಾಯವಾಣಿ 1098. ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿ, ರಕ್ಷಣಾ ಘಟಕ, ಸೇತು ಬಂಧ ಶಾಲೆಗಳು, ನಮ್ಮ ದೇಶದ ಶ್ರೀ ಕೈಲಾಶ್ ಸತ್ಯಾರ್ಥಿಯವರು ಮಕ್ಕಳ ಹಕ್ಕುಗಳ ದುಡಿಮೆಗಾಗಿ ನೋಬೆಲ್ ಶಾಂತಿ ಪ್ರಶಸ್ತಿ ಬಂದುದ್ದು ಕೆಲಸ ಮಾಡುವವರಿಗೆ ಸ್ಪೂರ್ತಿಯಾಗಬೇಕು ಮತ್ತು ಮಾಸಿಕ ಪುಸ್ತಕ ಹರಳು ಮಲ್ಲಗೆಯಂತ ಯೋಜನೆಗಳನ್ನು ಜಾರಿಗೆ ಮಾಡಿವೆ.

18 ವರ್ಷದ ಒಳಗಿನ ಎಲ್ಲಾ ಮಕ್ಕಳು ಶಾಲಾ ಸಮಯದಲ್ಲಿ ಓದು, ಬರಹ, ಲೆಕ್ಕಚಾರ ಕಲಿಯುವ, ಆಟೋಟಗಳಲ್ಲಿ ಭಾಗವಹಿಸುವ, ಮನೋರಂಜನೆ ಪಡೆಯುವ, ಶಾಲಾ ವಾತಾವರಣದಲ್ಲಿ ಶಿಕ್ಷಕ ಸಮುದಾಯದಲ್ಲಿರಬೇಕು. ಮಕ್ಕಳು ದೇಹ ಮನಸ್ಸುಗಳಿಗೆ ತೊಂದರೆ ಮಾಡುವ ಯಾವುದೇ ಕೆಲಸದಲ್ಲಿ ತೊಡಗಬಾರದು. ಮಕ್ಕಳು ದುಡಿಯುತ್ತಿದ್ದಾರೆ ಎಂದರೆ ಅದು ಆ ಸಮೂದಾಯ, ಸ್ಥಳೀಯ ಸರ್ಕಾರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಲೆ ತಗ್ಗಿಸುವ ಸಂಗತಿ ಎಂದು 1989ರಲ್ಲಿ ವಿಶ್ವ ಸಂಸ್ಥೆಯು ಮಕ್ಕಳ ಒಡಂಬಡಿಕೆಯಲ್ಲಿ 'ಮಕ್ಕಳ ದುಡಿಮೆ ಬೇಡ' ಸಂಪೂರ್ಣವಾಗಿ ನಿಷೇಧಿಸಬೇಕು. ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಿ ಹೊಲ ಗದ್ದೆ, ತೋಟ, ಮನೆ ಕೆಲಸಕ್ಕೆ ದೂಡುವುದು. ಹುಡುಗರನ್ನು ಹೋಟೆಲ್, ಗ್ಯಾರೇಜ್‌ಗಳಿಗೆ ಸೇರಿಸುವುದು. ತಮ್ಮ ಚಿಕ್ಕ ಪುಟ್ಟ ಕೆಲಸಗಳನ್ನು, ಮನೆಗೆಲಸಗಳಿಗೆ ಸಂಬಂಧಿಸಿದ ಕೆಲಸಗಳನ್ನು ಬಿಟ್ಟು ಹಣ ಸಂಪಾದನೆಗೆ ಒತ್ತಾಯಾಳಾಗಿ, ಅಡವಾಗುವುದು, ಜೀತದ ಹಣ ತೀರಿಸಲು ದುಡಿಯುವುದು ಅಪರಾಧವೆಂದು  ಶಾಲಾ ಸಮಯದಲ್ಲಿ ಯಾವುದೇ ಮಗು ಶಾಲೆಯ ಹೊರಗಿದ್ದಲ್ಲಿ ಆ ಬಗ್ಗೆ ಯಾರೇ ಆಗಲಿ ಪ್ರಶ್ನಿಸುವ, ವಿಚಾರಿಸುವ, ಸಂಪ್ರದಾಯ ಬೆಳೆಯಬೇಕು, ಬೆಳೆಸಬೇಕು ಇದು ನಮ್ಮೆಲ್ಲರ ಕರ್ತವ್ಯವು ಆಗಬೇಕು